ಅವತ್ತು ಸ್ವಾಮಾರದ ಸಂತೀ, ಕೈಯಾಗ ಚೀಲ ಕೊಟ್ಟು ಸುಮ್ಮಿ ಇಟುದ್ದು ಹೇಳಿ, ಮಾಡಿಕೊಂಡು ಬಾ ಅಂತ ಶಾಪೂರಿಗೆ ಕಳಿಸಿದ್ಳು. ನನಗೆ ಹಿಂಗ್ ಜನ ಜಂಗುಳಿ ಇದ್ದಲಿ ಹೋಗದು, ಇರದು, ಅಡ್ಡ್ಯಾಡದು ಅಂದರೆ ಆಗಿ ಬರಂಗಿಲ್ಲ. ಅಷ್ಟಾಗಿ ಹೇಳಿದ್ರು ಸೈತ ನಾನೇ ಹೋಗದು ಅನಿವಾರ್ಯ ಬಂದು, ಬಂದುಬುಡ್ತಿನಿ. ಒಮ್ಮೊಮ್ಮಿ ಬರದು ತಪ್ಪುತ್ತಿದ್ರು ಬಂದ ಮ್ಯಾಗ ಒಂದಲ್ಲಿಗೆ ಹೋಗದು ತಪ್ಪುತ್ತಿರಲಿಲ್ಲ. ಹೋಗಬಾರದು ಅಂದುಕೊಂಡ್ರು ಕೂಡ ಉಚ್ಚ್ಯಾ ಬಂದುಕೇಸಿ ಹೋಗಿಯೇ ಬಿಡ್ತೀನಿ. ಬಸ್ ಸ್ಟ್ಯಾಂಡಿನ ಹಿಂದುಗಡೆನೇ ಶೌಚಾಲಯ ಇರದರಿಂದ ಊರಿಗೆ ಹೋಗರು ಬರರು ಅಲ್ಲಿನೇ ಸೇರುತ್ತಿದ್ದರು. ಒಂದಿಬ್ರು ಇದ್ರು ಬಗಲಾಗ ಯಾರಾದ್ರೂ ಇದ್ರೆ ಉಚ್ಚ್ಯಾ ಬರದಿಲ್ಲಂತ ಕಾದುಕೇಸಿ ಹ್ವಾದ ಮ್ಯಾಗ ಮಾಡದಕ್ವಾದೆ. ಧಾತು ಮಿಶ್ರಿತ ಉಚ್ಚಿ ಉಯ್ಯೀದು ಮರಭೂಮ್ಯಾಗಿನ ಒಂಟಿ ಹಲ್ಲು ಪಾಚುಗಟ್ಟಿದಂತೆ ಕಬೋಡದ ಮ್ಯಾಗ ದಪ್ಪ ಪಾಚುಗಟ್ಟಿದ್ದು ನೋಡಿ ಹೊಟ್ಟ್ಯಾಗ ಕಲಿಸಿದಂಗಾಗಿ ಐದು ರೂಪಾಯಿ ಕೊಟ್ಟು ಬಾತ್ ರೂಮಿನೊಳಗ ಹ್ವಾದೆ. ಇದು ಮೊದಲೇನ್ ಅಲ್ಲ ಬಂದಿದ್ದು. ಎಲ್ಲೆಂದರಲ್ಲಿ ಗಬ್ಬು ಗಬ್ಬು ನಾತ. ಸಿಗರೇಟ್ ಸೇದಿ ಎಸೆದ ತುಣುಕುಗಳು ಬಾಗಿಲಿನ ಸಂದ್ಯಾಗ ಬಿದ್ದಿದವು. ಪಾನ ಪರಾಗ್ ತಿಂದ ಯಾವನೋ ಉಗುಳಿದ್ದು ಹಸಿ ಹಂಗೆ ಇದ್ದಿದ್ದು ನೋಡಿ ಉಗುಳಿದೆ. ಹ್ವಾದ ಸಲ ಬಂದಾಗ ನಾನಿದ್ದ ಬಾಜು ರೂಮಿಗೆ ಹೋಗಿದ್ದೆ. ನೋಡು ನೋಡುತ್ತಿದ್ದಂಗೆ ಬಾತರೂಮಿನ ಪಾರ ಬಂದು ಬಾಗ್ಲು ಬಾರಿಸಿದಾಗಲೇ ವಾಸ್ತವ ಅರಿವಿಗೆ ಬಂದು ಬಸ್ ಸ್ಟ್ಯಾಂಡಿಗೆ ತೇಲಿದ್ದೆ. ಸುಮ್ಮಿ ಜತಿ ಕೂಡಿದಾಗಲೆಲ್ಲಾ ನನಗೆ ಏನೆನೋ ಕಾಡದಕ್ಕ ಸುರು ಅನಸತ್ತಿತ್ತು. ಯಾರ ಜತಿಗೂ ಹೇಳದಕ್ಕ ಮುಜುಗರ ಸಂಕಟ, ಬಸಲಿಂಗನ ಜತಿ ಕಳೆದ ದಿನಗಳು ಚಣ ಬಿಡಲಾರದಂಗ ಕಾಡುತ್ತಿದ್ದಿದ್ದು ನಿಜ.

ಒಮ್ಮಿ ಕೆಳ ಓಣಿಯ ಮರಿಲಿಂಗನ ಜತಿ ಆಕಸ್ಮತ್ತಾಗಿ ಗೆಳೆತನ ಆಗುವ ಪ್ರಸಂಗ ಕೂಡಿ ಬಂತು. ಆತನ ದಪ್ಪನ ಮೈಕಟ್ಟು, ತೊಡೆಗಳು ನನ್ನನ್ನು ಇನ್ನಿಲ್ಲದಂತೆ ಸೆಳದಿತ್ತು. ನಾನೇ ಮ್ಯಾಗ ಬಿದ್ದು ಮಾತ್ತಾಡ್ಸತ್ತಿದ್ದೆ. ಒಮ್ಮಿ ನಂಬರು ಇಬ್ಬರು ಬದಲಿಸಿಕೊಂಡಿವಿ. ದಿನ ಬಿಟ್ಟು ದಿನ ಪೋನಲ್ಲಿ ಮಾತ್ತಾಡ್ತಿದ್ವಿ. ಆತನ ಮೊಬೈಲಿನ ವಾಟ್ಸಪ್ ಸ್ಟೇಟಸ್ಸಿನ್ಯಾಗ ಪೈಲ್ವಾನಂತೆ ಬಟ್ಟೆ ಉಟ್ಟಕಳ್ಳದೆ ಬರಿ ಮೈಯಲ್ಲಿ ತನ್ನ ಎದಿಯನ್ನು ಉಬ್ಬಿಸಿ, ತೋಳನ್ನು ಹುರಿಗಟ್ಟಿಸಿ ತೆಗೆದ ಪೋಟಗಳನ್ನು ದಿನ ಬಿಡದೆ ಇಡುತ್ತಿದ್ದ. ಅವು ಪದೇಪದೇ ನನ್ನನ್ನ ಕಾಡಿ ಹಿಂಡುತ್ತಿದ್ದು. ಲೈಕ್, ಸೂಪರ್ ಅಂತೆಲ್ಲ ಕಳಸದ್ರ ಜತೆಗೆ ನನ್ನಲ್ಲೂ ಸೇವ್ ಮಾಡ್ಕಂತಿದ್ದೆ. ಹೀಂಗ ಅವನ ಮೇಲಿನ ಆಸೆಯಿಂದ ಬ್ಯಾರೆ ಬ್ಯಾರೆ ಮ್ಯಾಟರ್ ತಗದು ತಾಸು ಗಂಟಲೇ ಮಾತ್ತಾಡಕ ಹರ ಸಾಹಸ ಪಡಕತ್ತಿದ್ದೆ. ಅವ್ನು ಏನ್ ಕೇಳಿದ್ರು ಎಲ್ಲದಕ್ಕೂ, 'ಹ್ಣೂನ್ರೀ, ಹೌದ್ರೀ' ಎಂದು ನನ್ನ ಮಾತಿಗೆ ದನಿಕೊಡುತ್ತಿದ್ದ. ಅವತ್ತು ಬುಧವಾರ ರಾತ್ರಿ ಎಂಟೊಂಬತ್ತು ಆದಂಗ ಆಗಿತ್ತು. ಅವನ ಸ್ಟೇಟಸನ್ನು ಬಿಡದೇ ನೋಡ್ತಿದ್ದ ನಾನು ಆ ಟೈಮಿನಲ್ಲಿ, 'ಬಾಡೆ ನಮ್ ಗಾಡು' ಎಂದು ಬರೆಯುವುದರ ಜತಿಗೆ, 'ನನ್ನ ಆಹಾರ ನನ್ನ ಹಕ್ಕು' ಅಂತ ಗಂಗಳದಾಗ ದೊಡ್ಡ ದೊಡ್ಡ ಕಂಡದ ಪೀಸಿನೊಂದಿಗೆ ಪೋಟ ತೇಗದು ಇಟ್ಟಿದ್ದ. ನಾನು ನೋಡಿದವ್ನೆ, 'ನಮ್ಮನ್ನ ಕರೆದಿಲ್ಲ ಏನಪ್ಪ ಊಟಕ್ಕ?' ಎಂದು ರಿಪ್ಲೇ ಕೊಟ್ಟೆ, ಅದಕ್ಕವನು, 'ನೀವು ಮಾಡ್ತೀರಿ? ಅಂದ್ರೇ ಬನ್ನಿರಿ ಮಾಡಕಂತೀರಿ ಊಟ' ಎಂದ.

'ವಲ್ಲೆಪ' ಎಂದೇಳಿದೆ.

'ಯಾಕ್ರೀ..? ಊಟ ಮಾಡಂಗಿಲ್ಲೇನ್ ನಮ್ಮ ಜತಿಗಿ'

'ಬರೀ ಚಿಕ್ಕನ್ ಸಾರಾದ್ರೆ ಪರವಾಗಿಲ್ಲ ಊಟ ಮಾಡಕ್ಕ ಟ್ರೈ ಮಾಡ್ತಿನಿ' ಎಂದು ರಿಪ್ಲೇ ಕೊಟ್ಟೆ.

'ಅಗ್ಲೇ ತಗರೀ ಅದೇ ಮಾಡಮು' ಎಂದ. ರೀಪ್ಲೇ ಕೊಟ್ಟವನಿಗೆ ಮಾತು ಮುಂದುವರೆಸಲು

'ಒಕೆ, ಡ್ರಿಂಕ್ಸ್ ಮಾಡ್ತಿಯೇನು' ಎಂದೆ.

'ಹ್ಣೂ ರೀ ಈಗ ಯಾಡು ಕ್ವಾಟರ್ ಕುಡುದೀನಿ ನೋಡ್ರೀ' ಯಾವುದೇ ಸಂಕೋಚ ಇಲ್ಲದೇ ಎಂದ.

'ಓಹ್ ಹಾಗಿದ್ರೆ ಭಾರಿ ಇರ್ತದ ಬಿಡಪ್ಪ ನಿಂದು' ಎಂದು, ಅಂಜಿಕೊಂಡು ಕೇಳಿದೆ.

'ಏನ್ರೀ ಅದು' ಎಂದು, ಕೇಳಿದವನ ಕಣ್ಣು ನೆಟ್ಟಗಾಗಿರಬಹುದು ಅನಿಸಿತು.

'ಅದೇ ನಿಂದು ಬಾಡಿ ದಪ್ವಾದ ಚೊಲಾ ಮೆಂಟೇನ್ ಮಾಡಿದಿ' ಎಂದು ಹೇಳಿದಾಗ ನನ್ನ ಮೈಮೇಲಿನ ರೋಮಗಳು ಮೆಲ್ಲಕ ನಿಗ್ರಿ ನಿಲ್ಲಾಕತ್ತಿದ್ವು

'ಹೌದಾ.!' ಎಂದು ಕೈಮುಗಿದಿದ್ದ ಎಮೋಜಿಗಳನ್ನು ಆತ ಕಳುವಿದ. ಸುಮ್ಮಿ ಮಲಗಿ ಬಾಳತ್ತು ಆಗಿತ್ತು. ಮೆಲ್ಲಕ ಟೈಮ್ ಏರುತ್ತಿದ್ದದ್ದು ನೋಡಿದೆ. ನಾನವನಿಗೆ ಮತ್ತೇನು